

ಕಾಡುತ್ತಿರಲಿಲ್ಲ. ಮುನ್ನಿಯ ಜೊತೆ ಕೆಲಸ ಮಾಡಿ, ದಣಿದು ಮರದ ಕೆಳಗೆ ಕೂರುವ ಕ್ಷಣಗಳು ಅವನಿಗೆ ಬದುಕಿನ ಅತ್ಯಂತ ತಂಪಿನ ನಿಮಿಷಗಳೆನಿಸುತ್ತಿದ್ದವು. ಬದುಕಿಗೊಂದು ಹೊಸ ಉದ್ದೇಶ ಸಿಕ್ಕಂತೆ ಇಬ್ಬರೂ ದುಡಿಯತೊಡಗಿದರು.

ಬೇಸಿಗೆ ರಜೆಯ ಎರಡು ವಾರಗಳಷ್ಟೇ ಬಾಕಿ ಇದ್ದವು. ಮುನೀರ, ಮುನ್ನಿ ಬೆಳೆದು ನಿಂತಿದ್ದ ಹಸಿ ಮೆಣಸುಗಳನ್ನು ಕೊಯ್ಯುತ್ತಿದ್ದರು. ಇದ್ದಕ್ಕಿದ್ದಂತೆ ಅವರೆದುರಿನ ದಿಗಂತದಿಂದ ಮೋಡಗಳ ದೊಡ್ಡ ದಂಡೊಂದು ಸಾಗಿ ಬಂತು. ನೋಡನೋಡುತ್ತಲೇ ತಲೆಯ ಮೇಲಿನ ಆಕಾಶದಲ್ಲಿ ಚಪ್ಪರ ಕಟ್ಟಿಕೊಂಡು ಮಿಂಚು, ಗುಡುಗಿನ ಸಮೇತ ನವಿರಾದ ಮಳೆಯೊಂದನ್ನು ಸುರಿಸಲಾರಂಭಿಸಿತು. ಮುನ್ನಿ ಹಾಗೂ ಮುನೀರ ಸೂರಿನಂತೆ ಅಗಲವಾಗಿದ್ದ ಮರವೊಂದರ ಕೆಳಗೆ ನಿಂತು ಸುರಿಯುವ ಮಳೆಯನ್ನೇ ದಿಟ್ಟಿಸಿ ನೋಡತೊಡಗಿದರು. ಬಿಸಿಲಿಗೆ ಕಾದಿದ್ದ ಮಣ್ಣು ಮಳೆಯ ಹನಿಗಳ ತಂಪನ್ನು ಮೆಂದು ಘಮ್ಮನೆ ಪರಿಮಳ ಹೊಮ್ಮಿ ಬಂತು. ಮೃದು ಮಳೆಯಲ್ಲಿ ಮೀಯುತ್ತಾ ಇಡೀ ಒಂದು ಬೇಸಿಗೆಯ ಧಗೆಯ ಕಳೆದುಕೊಳ್ಳುತ್ತಿದ್ದ ಮರ, ಗಿಡಗಳ ನೋಡಿದವರಿಗೆ ತಾವೂ ಸಹಾ ಹೀಗೇ ಆಂತರ್ಯದ ತೊಳೆದುಕೊಳ್ಳುತ್ತಿರುವ ಮರಗಳೇ ಅನ್ನಿಸಿತು.

'ಮಾಮೂ' ಮುನ್ನಿ ಮೆಲ್ಲನೆ ಕರೆದ. ಮುನೀರ. 'ಊ್ಹೂಂ?' ಎಂದ.

'ನಾನು ಇನ್ಮುಂದೆ ಮನೇಲಿರಲ್ಲ. ಪಿಯೂಸಿ ಮಾಡೋಕೆ ಮಂಗಳೂರಿಗೆ ಹೋಗ್ತೀನಿ. ಮುಂದಿನ ವಾರ ಹೊರಡ್ತೀನಿ' ಮರದಿಂದುದುರುತ್ತಿರುವ ಹನಿಗಳಷ್ಟೇ ಮೃದುವಾಗಿ ಮುನ್ನಿ ನುಡಿದ.

ಮುನೀರ ಮುಖವೆತ್ತಿ ನೋಡಿದ. ಮಳೆ ನಿಂತಿತ್ತು. ನೆಲ, ಮರಗಳೆಲ್ಲ ಸುರಿದ ಹನಿಗಳ ಪೈಕಿ ಆದಷ್ಟನ್ನು ಬಾಚಿಕೊಳ್ಳುವಂತೆ, ಬಾಚಿಕೊಂಡಿದ್ದನ್ನು ತಮ್ಮಲ್ಲೇ ಉಳಿಸಿಕೊಳ್ಳಲು ನೋಡುತ್ತಿರುವಂತೆ ನಿಂತಿದ್ದವು. ಮುನೀರ ಏನನ್ನೂ ಹೇಳಲಿಲ್ಲ. ಮರದ ಹನಿಗೆ ಒದ್ದೆಯಾಗಿದ್ದ ಅವನ ಮುಖದಲ್ಲಿ ಕಣ್ಣೀರಿನ ಹನಿಗಳೂ ಬೆರೆತಿರುವಂತೆ ಮುನ್ನಿಗನಿಸಿತು.

'ಹಸ್ರುಮಕ್ಕಿ ಲಾಂಚು ನೋಡೋಕೆ ಹೋಗ್ಬೇಕು ಮಾಮು. ನಿನ್ನ ಫ್ರೆಂಡ್ಯಾರೋ ಅಲ್ಲೇ ಲಾಂಚಲ್ಲಿ ಕೆಲಸ ಮಾಡ್ತಿದಾರೆ ಅಂದಿದ್ಯಲ್ಲ, ಬರ್ತೀಯಾ?'

ಮುನ್ನಿ ಸಮಾಧಾನ ಮಾಡಲೆಂಬಂತೆ ಕೇಳಿದ. ಮುನೀರ ಸುಮ್ಮನೆ ಹ್ಞೂಂ ಎಂದ.

ಮುಗಿದ ಮಳೆ ಕೊಟ್ಟ ತಂಪಷ್ಟೇ ಉಳಿದುಹೋದ ಆ ಸಂಜೆ ಹಾಗೆ ಜಾರಿಹೋಯಿತು.

* * *

ಮರುದಿನ ಬೆಳಗ್ಗೆ ಬೇಗ ಎದ್ದ ಇಬ್ಬರು ಹೊಸನಗರದ ಬಸ್ಸು ಹತ್ತಿದರು. ಎಲ್ಲೋ ನಡುವೆ ಇಳಿದು, ಒಂದಷ್ಟು ದೂರ ನಡೆದು ಹಸಿರುಮಕ್ಕಿಯ ಸೇರಬೇಕಿತ್ತು. 'ಬಸ್ಸುಗಳೇ ಹೋಗದ ದಾರಿ ನನಗಿಷ್ಟ' ಎಂದ ಮುನೀರ. ಅದಕ್ಕೆ ಮುನ್ನಿ, 'ನನಗೆ ಕಾರಿನಲ್ಲಿ ಹೋಗೋದು ಇಷ್ಟ' ಎಂದ. ಒಂದೇ ದಾರಿ ಎರಡು ಕವಲಾದ ಜಾಗದಲ್ಲಿ ಅವರನ್ನಿಳಿಸಿ ಬಸ್ಸು ಮುಂದಕ್ಕೆ ಹೋಯಿತು. ಅಲ್ಲೊಂದು ಗೂಡಂಗಡಿ, ನೀಲಿ ಮರವೊಂದು ಥರಹೇವಾರಿ ಹಣ್ಣು ಬಿಟ್ಟಂತೆ ಬೋಟಿ, ಕಡಲೇಕಾಯಿ, ಎಳನೀರುಗಳ ನೇತುಹಾಕಿಕೊಂಡು ನಿಂತಿತ್ತು. ಎಳನೀರನ್ನು ಬಾಟಲಿಗೆ ತುಂಬಿಸಿಕೊಂಡು, ಕಡಲೇಕಾಯಿ ಮೆಲ್ಲುತ್ತಾ ಹಸಿರುಮಕ್ಕಿಯ ದಾರಿಯಲ್ಲಿ ನಡೆದರು. ಬಿಸಿಲಿನ ತಾಪ ಅತಿಯಾದಾಗ ನಡುವೆ ಸಿಕ್ಕ ಕಟ್ಟೆಯೊಂದರ ಮೇಲೆ ಕುಳಿತು ಗಟಗಟನೆ ಎಳನೀರು ಕುಡಿದರು. ಬಿಸಿಲು ಏರಿದಷ್ಟೂ ಎಳನೀರಿನ ಸಿಹಿ ದುಪ್ಪಟ್ಟಾದಂತೆ ಅನಿಸುತ್ತಿತ್ತು. ಇಬ್ಬರ ನಡುವೆಯೂ ಮಾತೇ ಇರಲಿಲ್ಲ. ಬಾಯ್ಬಿಟ್ಟರೆ ಈ ಪಯಣದ ಬಳಿಕ ಒಬ್ಬರನ್ನೊಬ್ಬರು ಅಗಲಬೇಕು, ಗುಡ್ಡದಲ್ಲಿ ನೆಟ್ಟ ಗಿಡಗಳು ಅನಾಥವಾಗಬೇಕು ಎಂಬ ವಿಷಯಗಳ ಪೈಕಿ ಯಾವೊಂದಾದರೂ ಚರ್ಚೆಗೆ ಬಂದು ರಸಭಂಗವಾದೀತೇನೋ ಎಂಬ ಭಯ ಇಬ್ಬರನ್ನೂ ಆವರಿಸಿತ್ತು.

ಆಗ ಕಂಡಿತು ಮುಳುಗಡೆಯ ನೀರು... ಆ ತೀರ - ಈ ತೀರಗಳ ನಡುವೆ ನೀಲಿಯಾಗಿ ನಿಂತ ಡ್ಯಾಮಿನ ಹಿನ್ನೀರು. ಅಲ್ಲೆಲ್ಲೋ ಪರ್ವತದಾಚೆಯಲ್ಲಿ ಯಾರೋ ಚೆಲ್ಲಿದಂತೆ ಅತ್ತಲಿಂದ ಹರಿದುಕೊಂಡು ಬಂದು, ದಡವ ಪುಳಕ್ ಪುಳಕ್ಕೆಂದು ಸೋಕುತ್ತಿತ್ತು. ಅಲೆಯಲೆಯಾಗಿ ಕುಲುಕುತ್ತಿದ್ದ ನೀರಿನ ಮೇಲೆ ಬಿಸಿಲಿನ ಕಿರಣಗಳು ತೇಲುತ್ತಿದ್ದವು. ಲಾಂಚಿನ್ನೂ ಅರ್ಧ ದಾರಿಯಲ್ಲಿತ್ತು. ದಡದೆದೆಗೆ ಕಚಗುಳಿಯಿಡುವಂತೆ